ಓ.ಎಸ್. 73/2009

ಡಿ.ಡಬ್ಲ್ಯೂ-3

ದಿನಾಂಕಃ 07-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

ನನ್ನ ಪ್ರತಿವಾದ ಪತ್ರದಲ್ಲಿರುವ ಸಂಗತಿಗಳೆಲ್ಲ ನನಗೆ ಗೊತ್ತು. ರಾಮಯ್ಯನವರಿಗೆ ದಾಕ್ಷಾಯಿಣಿ ಎಂಬ ಹೆಂಡತಿ ಇದ್ದರು ಎಂದು ಬರೆಸಿರುತ್ತೀರಾ ಅದಕ್ಕೆ ದಾಖಲೆ ನೀಡಿದ್ದೀರಾ ಎಂದರೆ ಇಲ್ಲ, ಮುಂದುವರೆದು ಅವರ ಸೊಸೆ ಎಂದು ಬರೆಸಿರುತ್ತೇನೆಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ರಾಮಯ್ಯವರಿಗೆ ದಾಕ್ಷಾಯಿಣಿ ಎಂಬ ಹೆಂಡತಿ ಇದ್ದಳು ಎಂದು ಬರೆಸಿದ್ದರೆ ಅದು ಸುಳ್ಳು ಎಂದರೆ ಸರಿ. ಹೇಳವಯ್ಯನವರಿಗೆ ಪುಟ್ಟಮ್ಮ ಮತ್ತು ಹನುಮಮ್ಮ ಎಂಬ ಮಕ್ಕಳು ಇದ್ದರು ಎಂದು ಹೇಳಿದ್ದು, ಅದರ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ದಾವಾ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 2 ರವರೊಂದಿಗೆ 6 ರಿಂದ 11 ನೇ ಪ್ರತಿವಾದಿಗಳಾದ ನಾವುಗಳು ಸಹ ಅನುಭವಸುತ್ತಿದ್ದೇವೆಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 2 ರವರೊಂದಿಗೆ 6 ರಿಂದ 11 ನೇ ಪ್ರತಿವಾದಿಗಳಾದ ನಾವುಗಳು ಸಹ ಅನುಭವಸುತ್ತಿದ್ದೇವೆಂದು ನೋಡಿರುವ ಸಾಕ್ಷಿದಾರರು ಇರುತ್ತಾರೆ. 6 ರಿಂದ 11 ನೇ ಪ್ರತಿವಾದಿಗಳಾದ ನಾವುಗಳು ಎಂದಿಗೂ ಸಹ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಮತ್ತು ದಾವಾ ಆಸ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹೇಳವಯ್ಯ ನವರಿಗೆ ಪುಟ್ಟಮ್ಮ ಮತ್ತು ಹನುಮಮ್ಮ ಎಂಬ ಮಕ್ಕಳು ಇದ್ದು, ಸದರಿಯವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಬೇಕೆಂದು ತಕರಾರು ಸಲ್ಲಿಸಿರುವುದಿಲ್ಲ.

ಪ್ರತಿವಾದಿ ನಂ.1 ಮತ್ತು 2 ರವರ ಪರವಾಗಿ ಬಸವಯ್ಯನವರ ಮಗ ಟಿ.ರಾಮಕೃಷ್ಣಯ್ಯ ರವರು ಸಾಕ್ಷಿ ನುಡಿದಿರುತ್ತಾರೆಂದರೆ ಸರಿ. ಸದರಿಯವರು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಮ್ಮನ್ನು ಎತ್ತಿ ಕಟ್ಟಿ ರಾಮಯ್ಯನವರಿಗೆ 2 ನೇ ಹೆಂಡತಿ

ಮತ್ತು ಮಕ್ಕಳು ಇದ್ದರು ಎಂದು ತಕರಾರು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ವಾದಿಗಳು ನಮ್ಮ ವಿರುದ್ಧ ದಾವೆ ಸಲ್ಲಿಸದಿದ್ದರೂ, ದಾವೆ ಹೂಡಿ ಸುಮಾರು ವರ್ಷಗಳಾದ ನಂತರ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಅರ್ಜಿ ಸಲ್ಲಿಸಿ ನಾವು ಪಕ್ಷಗಾರರಾಗಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿ 6 ರಿಂದ 11 ರವರು ಹೇಳವಯ್ಯ ನವರ ವಂಶಸ್ತರು ಅಲ್ಲದ ಕಾರಣ ಹಾಗೂ ರಾಮಯ್ಯನವರಿಗೆ 2 ನೇ ಹೆಂಡತಿ ಇಲ್ಲದ ಕಾರಣ ನಮಗೂ ಹಾಗೂ ದಾವಾ ಆಸ್ತಿಗೆ ಸಂಬಂಧ ಇಲ್ಲದಿದ್ದರೂ, ವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ ನಂ.1(ಬಿ)(ಸಿ), 2 ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.